



ನೋಡಿದರೂ ಟೊಮ್ಯಾಟೊ ಬಗ್ಗೇನೆ ಜೋಕುಗಳು, ಮೀಮ್‌ಗಳು, ರೀಲ್ಸ್ ಮತ್ತು ವಿಡಿಯೋಗಳು ಕಾಣಸಿಗುತ್ತವೆ. ಮೊನ್ನೆ ಯಾರೋ ಮದುಮಕ್ಕಳು ಟೊಮ್ಯಾಟೊದ ವಿಧವಿಧ ವಿನ್ಯಾಸಗಳ ಕಲಾಕೃತಿಯ ಹಿನ್ನೆಲೆಯಲ್ಲಿ ಪ್ರೀ ವೆಡ್ಡಿಂಗ್ ಫೋಟೊ ಶೂಟ್ ಮಾಡಿಸಿಕೊಂಡಿದ್ದರು. ಆ ಫೋಟೊ ವೈರಲ್ ಆಗಿತ್ತು. ಅದನ್ನು ನೋಡಿದ ನಮ್ಮ ತರಕಾರಿ ಸೀನಪ್ಪನ ಮಗ ತಾನೂ ತನ್ನ ಹೊಸ ಹೆಂಡತಿಯೊಂದಿಗೆ ತನ್ನ ತರಕಾರಿ ಅಂಗಡಿಯಲ್ಲಿದ್ದ ಟೊಮ್ಯಾಟೊ ರಾಶಿಗಳ ನಡುವೆ ಕೂತು 'ಪೋಸ್ಟ್ ವೆಡ್ಡಿಂಗ್ ಫೋಟೊ ಶೂಟ್ ವಿತ್ ಕಾಸ್ಟ್ಲಿ ಟೊಮ್ಯಾಟೊಸ್' ಎಂದು ಕ್ಯಾಪ್ಶನ್ ಹಾಕಿಕೊಂಡು ತನ್ನ ಸ್ಟೇಟಸ್‌ನಲ್ಲಿ, ಇನ್‌ಸ್ಟಾಗ್ರಾಮ್‌ನಲ್ಲಿ ಎಲ್ಲ ಕಡೆ ಹಾಕಿ ಮೆರೆದದ್ದೇ ಮೆರೆದದ್ದು.

ಹೋಗಿ ಕೇಳಿದೆ, 'ಏನೋ ಸೀನಪ್ಪ, ಹೊಸ ಹೆಂಡತೀನ ಆಗಲೇ ತರಕಾರಿ ಮಾರೋಕೆ ನಿನ್ನ ಜೊತೆ ಕೂರಿಸಿಕೊಂಡೇ ಬಿಟ್ಟೆಯಾ? ಗೊತ್ತಾಯ್ತು ಬಿಡು. ಅವಳನ್ನು ಒಂದು ಗಳಿಗೆಯೂ ಬಿಟ್ಟಿರೋಕೆ ಆಗೋದಿಲ್ವಲ್ಲ ನಿನಗೆ?' ಎಂದು ಕಾಲೆಳೆದೆ.



'ಅಯ್ಯೋ ಮೇಡಂ, ಅದು ಹಾಗಲ್ಲ. ಕೆಲವು ಸೂಟು ಬೂಟು ಹಾಕ್ಕೊಂಡು ಬಂದಿರೋ ದೊಡ್ಡ ಮನುಷ್ಯರು ಕೂಡ ನಾನು ಬೇರೆಯವರಿಗೆ ತರಕಾರಿ ಕೊಡೋವಾಗ ನನ್ನ ಕಣ್ತಪ್ಪಿಸಿ ಎರಡು ಮೂರು ಟೊಮ್ಯಾಟೊ ಎಗರಿಸಿಬಿಟ್ಟಿರ್ತಾರೆ. ಅದಕ್ಕೆ ಟೊಮ್ಯಾಟೊ ಕಾಯೋಕೆ ಇವಳನ್ನು ಕೂರಿಸಿಕೊಂಡಿದೀನಿ' ಎಂದು ತಲೆಕೆರೆದುಕೊಳ್ಳುತ್ತಾ ಹೇಳಿದ.

'ಅಯ್ಯೋ ಟೊಮ್ಯಾಟೊ... ಏನು ನಿನ್ನ ಲೀಲೆ? ನಿನಗಾಗಿ ಉಳ್ಳವರೂ ಕಳುವು ಮಾಡುವಂತಾಯ್ತಾ?' ಎನಿಸಿ ನಗುಬಂತು. ವಿಪರೀತ ಬೆಳೆ ಬಂದಾಗ ಕೇಳುವವರಿಲ್ಲದೆ ಐದು ರೂಪಾಯಿಗೆ ಕೆ.ಜಿ. ಟೊಮ್ಯಾಟೊ ಸಿಗುತ್ತದೆ. ಆಗೆಲ್ಲ ನಮ್ಮ ಮನೆಯಲ್ಲಿ ಟೊಮ್ಯಾಟೊದೆ ರೆಸಿಪಿಗಳು! ತೊಕ್ಕು, ಸಾರು, ಕೂರ್ಮ, ಸಾಗು, ರಸಂ, ಭಾತ್ – ಹೀಗೆ ಥೀಂ ಟೊಮ್ಯಾಟೊ ಅಡುಗೆಗಳು. ಈಗ ಇದಕ್ಕೆ ಚಿನ್ನದ ರೇಟು! ಫ್ರಿಜ್‌ನಲ್ಲಿ ಇಡುವ ಬದಲು ಸೇಫ್ ಲಾಕರ್‌ನಲ್ಲಿ ಇಡಬೇಕಾಗಿದೆ. ಟೊಮ್ಯಾಟೊ ತುಂಬಿದ ಲಾರಿಗಳೇನಾದರೂ ರಸ್ತೆಯಲ್ಲಿ ಹೋಗುತ್ತಿದ್ದರೆ ಮಂತ್ರಿಗಳ ಕಾರಿನ ಹಿಂದೆ ಮುಂದೆ ಸೆಕ್ಯೂರಿಟಿಗಾಗಿ ಐದಾರು ಕಾರುಗಳು ಹೋದಂತೆ ಇದರ ಹಿಂದೆಯೂ ಹೋಗಬೇಕಾದ ಪರಿಸ್ಥಿತಿ. ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ ಅನ್ನೋ ಗಾದೇನ ಸ್ವಲ್ಪ ಬದಲಾಯಿಸಿ, 'ಈರುಳ್ಳಿಗೊಂದು ಕಾಲ, ಟೊಮ್ಯಾಟೊಗೊಂದು ಕಾಲ' ಅಂತ ಮಾಡೋಣ. ಈರುಳ್ಳಿಯೂ ಆಗಾಗ ಹೀಗೆ ಮೆರೆದಾಡುವುದಲ್ಲವೆ.

ಮೊನ್ನೆ ಯಾವುದೊ ಮದುವೆ ಮನೆ ಊಟದಲ್ಲಿ ಸಾರು ಬಡಿಸಿದರು. ಅದರಲ್ಲಿ ಟೊಮ್ಯಾಟೊ ಕಾಣಿಸಲಿಲ್ಲ. ನನ್ನ ಆಚೆ ಈಚೆ ಕೂತವರಿಗೆ, 'ನಿಮಗೇನಾದರೂ ಅನ್ನ–ಸಾರು ಕಲಸೋವಾಗ ಟೊಮ್ಯಾಟೊ ಹೋಳುಗಳು ಸಿಕ್ಕಿದವಾ?' ಅಂತ ಕೇಳಿದೆ. ಎಲ್ಲರೂ ಒಕ್ಕೊರಲಿನಿಂದ 'ಇಲ್ಲ' ಎಂದರು. 'ಹಾಗಾದರೆ ಸಾರಿಗೆ ಟೊಮ್ಯಾಟೊನೆ ಹಾಕಿಲ್ಲ ಅಂತಾಯ್ತು. ತಡೀರಿ, ಇದರ ಬಗ್ಗೆ ಮದುಮಗಳ ತಾಯಿಯ ಹತ್ತಿರ ಕಂಪ್ಲೇಂಟ್ ಮಾಡೋಣ, ಚೌಲ್ಟ್ರಿಯವರು ನಿಮ್ಮ ಹತ್ತಿರ ಹಣ ಪಡೆದು ಸಾರಿಗೆ ಟೊಮ್ಯಾಟೊ ಹಾಕದೆ ಮೋಸ ಮಾಡಿದ್ದಾರೆ ಅಂತ. ಛತ್ರದವರನ್ನು ಸುಮ್ಮನೆ ಬಿಡಬಾರದು' ಎಂದು ಎಲ್ಲರೂ ನಿರ್ಧರಿಸಿ ಅದರ ಬಗ್ಗೆ ಹುಡುಗಿಯ ತಾಯಿ ಕಮಲಾರ ಬಳಿ ಹೇಳಿದೆವು.



'ಅದು ಹಾಗಲ್ಲಾರೀ... ಹುಡುಗನ ಕಡೆಯವರು ತಮ್ಮ ಕಡೆಯವರಿಗೆ ಅರಿಶಿನ ಕುಂಕುಮದ ಜೊತೆಗೆ ಫಲದಾನ ಅಂತ ತೆಂಗಿನಕಾಯಿ ಬದಲು ಒಂದು ಕವರ್‌ಗೆ ನಾಲ್ಕು ಟೊಮ್ಯಾಟೊ ಹಾಕಿ ಕೊಡೋಕೆ ಹೇಳಿದ್ರು. ಅದಕ್ಕೆ ನಾವು ಚೌಲ್ಟ್ರಿಯವರು ಸಾರಿಗೆ ಹಾಕೋಕೆ ಅಂತ ತಂದ ಟೊಮ್ಯಾಟೊ ಜೊತೆಗೆ ಮಾರ್ಕೆಟ್‌ನಿಂದ ಮತ್ತೊಂದಿಷ್ಟು ಟೊಮ್ಯಾಟೊ ತರಿಸಿ ಪ್ಯಾಕ್ ಮಾಡಿ, ಬೀಗರ ಕಡೆಯವರನ್ನೆಲ್ಲ ಒಳಗೆ ಕರೆದು ಅರಿಶಿನ ಕುಂಕುಮದ ಜೊತೆಗೆ ಟೊಮ್ಯಾಟೊ ಪ್ಯಾಕೆಟ್ ಕೊಟ್ಟೆವು' ಎಂದು ಬೆವರೊರೆಸಿಕೊಂಡರು. ಕೇಳಿದ ನಮಗೆ ಬವಳಿ ಬರುವುದೊಂದು ಬಾಕಿ.

ನನ್ನ ಗೆಳತಿಯೊಬ್ಬಳು 'ನಿಮ್ಮೂರಿನ ಯಾವುದೋ ಫಂಕ್ಷನ್‌ಗೆ ಬರೋದಿದೆ. ಬಂದಾಗ ನಿಮ್ಮ ಮನೆಗೆ ಬರ್ತೀನಿ' ಎಂದವಳು, ಹೇಳಿದ ತಾರೀಕಿಗೆ ಬಾರದೇ ಇದ್ದಾಗ ವಿಚಾರಿಸಿದರೆ, 'ಹಿತ್ತಲಲ್ಲಿ ಒಂದಷ್ಟು ಟೊಮ್ಯಾಟೊ ಗಿಡ ನೆಟ್ಟಿದ್ದೆ. ಅದು ಕಾಯಿ ಬಿಟ್ಟಿದೆ. ಈಗ ನಾನು ಮನೆ ಬೀಗ ಹಾಕಿ ಎಲ್ಲೂ ಹೋಗೋದಿಲ್ಲ ಕಣೇ. ಆಮೇಲೆ ಯಾರಾದ್ರು ಬಂದು ಅದನ್ನು ಎಗರಿಸಿಬಿಟ್ಟಾರು' ಎಂದಾಗ, 'ಅಯ್ಯೋ ರಾಮ! ಒಂದು ನಾಲ್ಕು ಟೊಮ್ಯಾಟೊಗೋಸ್ಕರ ಫಂಕ್ಷನ್ ತಪ್ಪಿಸಿಕೊಂಡೆಯಾ?' ಎಂದು ಹಣೆಹಣೆ ಚಚ್ಚಿಕೊಂಡೆ.

ಮೊನ್ನೆ ದೂರದೂರಿನ ಹಾಸ್ಟೆಲ್‌ನಲ್ಲಿರುವ ನನ್ನ ಮಗಳು ಫೋನ್ ಮಾಡಿದ್ದಳು. 'ಹಾಸ್ಟೆಲ್ ಊಟ ಉಂಡು ಉಂಡು ನಾಲಿಗೆ ಜಡ್ಡುಗಟ್ಟಿ ಹೋಗಿದೆ. ಈ ವೀಕೆಂಡ್ ಮನೆಗೆ ಬರಲಾ? ನಿನ್ನ ಕೈ ಟೊಮ್ಯಾಟೊ ಸಾರು, ಟೊಮ್ಯಾಟೊ ಭಾತ್ ಮಿಸ್ ಮಾಡ್ಕೊಳ್ತಾ ಇದೀನಿ' ಎಂದಳು. 'ಸದ್ಯಕ್ಕೆ ಬೇಡ. ಟೊಮ್ಯಾಟೊ ರೇಟ್ ಸ್ವಲ್ಪ ಕಡಿಮೆಯಾಗಲಿ, ಆಮೇಲೆ ಬಾ' ಎಂದು ಸಮಾಧಾನಿಸಿದೆ.

'ಹೂಂ, ಇವತ್ತು ಸಬ್ ವೇಗೆ ನಾವು ಒಂದಷ್ಟು ಹುಡುಗಿಯರು ಹೋಗಿದ್ವಿ. ನಾನು ವೆಜ್ ಬರ್ಗರ್ ಆರ್ಡರ್ ಮಾಡಿದ್ದೆ. ಟೊಮ್ಯಾಟೊ ಹಾಕಬೇಡಿ ಅಂದೆ. ಹಾಸ್ಟೆಲ್ ಲೈಫ್ ಕಾಸ್ಟ್ ಕಟಿಂಗ್...' ಎಂದು ನಕ್ಕಳು. 'ಹೂಂ, ಎಷ್ಟೆಂದರೂ ನನ್ನ ಮಗಳಲ್ಲವಾ' ಎಂದು ನಾನು ಬೀಗಿದೆ.

**ಪ್ರತಿಕ್ರಿಯಿಸಿ: feedback@sudha.co.in**